# ಬಂಧೀಖಾನೆಗಳು

## ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳಿಗಲ್ಲ


**ವಾಸುದೇವ ಶರ್ಮಾ**

*ಅಧ್ಯಕ್ಷರು, ಮಕ್ಕಳ ಕಲ್ಯಾಣ ಸಮಿತಿ, ಬೆಂಗಳೂರು ನಗರ*


ಏಪ್ರಿಲ್ 2008ರಲ್ಲಿ ನಂಬಲಾಗದ ಒಂದು ವಿಚಾರ ಬೆಳಕಿಗೆ ಬಂದಿತು. ಅದರಿಂದಾಗಿ ಒಂದು ಸಂದಿಗ್ಧ ಪರಿಸ್ಥಿತಿ ಏರ್ಪಟ್ಟಿತು. ಬೆಂಗಳೂರಿನ ಬಂಧೀಖಾನೆಯಲ್ಲಿ 18 ವರ್ಷದೊಳಗಿನವರು ಕೆಲವರು ನ್ಯಾಯಾಂಗ ಬಂಧನದಲ್ಲಿದ್ದಾರೆಂಬ ಅಧಿಕೃತ ಸುದ್ದಿ ಹೊರಬಿದ್ದಿತು.



ಈ ಸುದ್ದಿ ಸಂಬಂಧಿಸಿದ ಎಲ್ಲರೆದುರು ಎದ್ದ ಪ್ರಶ್ನೆಗಳು: ಮಕ್ಕಳು ಎಂದು ಶಂಕಿಸಲಾದವರು ಕಾರಾಗೃಹದೊಳಗೆ ಬರಲು ಯಾರು ಕಾರಣ – ಬಂಧೀಖಾನೆಗಳ ಅಧಿಕಾರಿಗಳೇ, ನ್ಯಾಯಾಧೀಶರೆ, ವಕೀಲರುಗಳೆ ಅಥವಾ ಪೊಲೀಸರೆ?

ಪ್ರಾಯಶಃ ಅನೇಕರ ಮನಸ್ಸಿನಲ್ಲಿ ಎದ್ದ ಪ್ರಶ್ನೆಗಳು 'ತಪ್ಪು ಎಲ್ಲಿ ಆಯಿತು? ಇಂತಹ ಸ್ಥಿತಿ ಏಕೆ ಉದ್ಭವಿಸಿತು? ಈ ಪರಿಸ್ಥಿತಿ ಇಷ್ಟು ಬಿಗಡಾಯಿಸುವ ತನಕ ಏಕೆ ಯಾರ ಗಮನಕ್ಕೂ ಬರಲಿಲ್ಲ ಅಥವಾ ಬಂದಿದ್ದಲ್ಲಿ ಕ್ರಮಗಳನ್ನೇಕೆ ತೆಗೆದುಕೊಳ್ಳಲಿಲ್ಲ' ಇತ್ಯಾದಿ. ಮಕ್ಕಳ ಹಕ್ಕುಗಳು, ಭಾರತದ ಸಂವಿಧಾನ, ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯಿದೆ 2000ದ ಹಿನ್ನೆಲೆಯಲ್ಲಿ ಹಾಗೂ ಕಾರಾಗೃಹಗಳ ಕಾಯಿದೆ, ಕಾರಾಗೃಹಗಳ ನಿವಾಸಿಗಳ ಕಾಯಿದೆ ಮತ್ತು ಕಾರಾಗೃಹ ನಿರ್ವಹಣೆಯ ಕೈಪಿಡಿಯಲ್ಲಿನ ಹಲವಾರು ಅಂಶಗಳನ್ನು ಹಿನ್ನೆಲೆಯಲ್ಲಿಟ್ಟುಕೊಂಡು ಈ ವಿಚಾರದ ಬಗ್ಗೆ ಚರ್ಚಿಸಬೇಕಿದೆ. ಪರಿಸ್ಥಿತಿ ಏಕೆ ಹೀಗಾಯಿತು ಎನ್ನುವುದರ ಜೊತೆಯಲ್ಲೇ ಮುಂದೆ ಇಂತಹ ಪರಿಸ್ಥಿತಿ ಬಾರದಂತೆ ಯಾರೆಲ್ಲಾ ಎಚ್ಚರಿಕೆ ವಹಿಸಬೇಕಿದೆ, 'ಬಂಧೀಖಾನೆಗಳು ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳಿಗಲ್ಲ' ಎಂದು ಈ ಮೂಲಕ ಸ್ಪಷ್ಟೀಕರಿಸಿಕೊಳ್ಳಬೇಕಿದೆ.

ನನ್ನ ಸದ್ಯದ ಹಾಗೂ ಹಿಂದಿನ ಅನುಭವಗಳನ್ನು ಆಧರಿಸಿ ಹೇಳುವುದಾದರೆ ಪೊಲೀಸರು ಮಕ್ಕಳನ್ನು ವಶಕ್ಕೆ ತೆಗೆದುಕೊಳ್ಳುವ ಸಂಖ್ಯೆ ಹೆಚ್ಚಾಗುತ್ತಲೇ ಇದೆ. ಪ್ರಾಯಶಃ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಗಂಭೀರವಾದ 'ಅಪರಾಧ'ವೆಂದು ಗುರುತಿಸಲ್ಪಡುವ ಕೃತ್ಯಗಳಲ್ಲಿ ತೊಡಗಿರುವುದು ಆಗಿರಬಹುದು ಅಥವಾ ಪೊಲೀಸರು ಹೆಚ್ಚಿನ ಜಾಗ್ರತೆ ವಹಿಸಿ ಅಪರಾಧಗಳನ್ನು ಪತ್ತೆ ಮಾಡುವ ಕೆಲಸದಲ್ಲಿ ತೊಡಗಿರಬಹುದು, ಅಥವಾ ಮಕ್ಕಳನ್ನು ತಪ್ಪಾಗಿ ಬಂಧಿಸಿರಬಹುದು. ಕಾರಣ ಯಾವುದೇ ಇರಬಹುದು. ಮಕ್ಕಳು ಬಂಧಿಗಳಾಗುತ್ತಿರುವುದು ವಾಸ್ತವ.

**ಕೆಲವು ವಾಸ್ತವಾಂಶಗಳು** (ವಿವಿದ ಮೂಲಗಳಿಂದ)

- ಜಗತ್ತಿನಾದ್ಯಂತ ಸುಮಾರು 10 ಲಕ್ಷಕ್ಕೂ ಹೆಚ್ಚು ಮಕ್ಕಳು ಬಂಧನದಲ್ಲಿದ್ದಾರೆ.
- ಅಧಿಕೃತವಾಗಿ ಭಾರತದ ವಿವಿಧ ಬಂಧೀಖಾನೆಗಳಲ್ಲಿ 16 ರಿಂದ 18 ವರ್ಷದೊಳಗಿನ 94 ಮಕ್ಕಳು ಶಿಕ್ಷೆ ಅನುಭವಿಸುತ್ತಿದ್ದಾರೆ ಹಾಗೂ 1230 ವಿಚಾರಾಧೀನ ಮಕ್ಕಳಿದ್ದಾರೆ.
- ಹೀಗೆ ಬಂಧನದಲ್ಲಿರುವ ಪ್ರತಿ ಶತ 90 ಮಕ್ಕಳು ಎದುರಿಸುತ್ತಿರುವುದು ತೀರಾ ಕ್ಷುಲ್ಲಕವಾದ ಆಪಾದನೆಗಳು.

- ಪ್ರತಿ ಐದು ಮಕ್ಕಳಲ್ಲಿ ನಾಲ್ವರು ಪ್ರಾಯಶಃ ತಮ್ಮ ಜೀವಿತದಲ್ಲೇ ಮಾಡಿರುವ ಮೊದಲ ತಪ್ಪಿನ ಫಲವಾಗಿ ಕಾರಾಗೃಹಕ್ಕೆ ಬಂದಿರುತ್ತಾರೆ
- ಪೊಲೀಸರಿಂದ ಬಂಧಿತರಾಗಿ, ನ್ಯಾಯಾಲಯದೆದುರ ವಿಚಾರಣೆಗೆ ಬಂದು ಕಾರಾಗೃಹದಲ್ಲಿ ಬಂಧಿಗಳಾಗಿರುವ ಮಕ್ಕಳಲ್ಲಿ ಬಹುತೇಕರು ಹಿಂದುಳಿದ ಜಾತಿ, ವರ್ಗಕ್ಕೆ ಸೇರಿದ ಬಡ ಕುಟುಂಬದವರಾಗಿರುತ್ತಾರೆ. ಮತ್ತು ಧಾರ್ಮಿಕವಾಗಿ ತಾರತಮ್ಯಕ್ಕೆ ಗುರಿಯಾಗಿರುವ ಸಾಧ್ಯತೆಗಳನ್ನು ಅಲ್ಲಗಳೆಯುವಂತಿಲ್ಲ.
- ಹೀಗೆ ಬಂಧೀಖಾನೆಗಳಿಗೆ ದೂಡಲ್ಪಟ್ಟ ಮಕ್ಕಳು ಸಾಮಾನ್ಯವಾಗಿ ತಮ್ಮ ಮನೆಗಳಲ್ಲೇ ಹಿಂಸೆ, ದೌರ್ಜನ್ಯ, ಲೈಂಗಿಕ ಶೋಷಣೆಗೆ ಒಳಗಾಗಿರುವವರಾಗಿರುತ್ತಾರೆ.
- ಕಾನೂನಿನೊಡನೆ ಸಂಘರ್ಷದಲ್ಲಿರುವ ಪ್ರತಿ ಶತ 70 ಮಕ್ಕಳು ತಿಳಿಸಿರುವುದು, ಅವರು ಕಳ್ಳತನ ಅಥವಾ ಅಂತಹ ಕೃತ್ಯಗಳನ್ನು ಮಾಡಿದ್ದು ಆಹಾರ ಮತ್ತು ಕೆಲವು ಮೂಲ ಆವಶ್ಯಕತೆಗಳನ್ನು ಪೂರೈಸಿಕೊಳ್ಳಲು ಎಂದು
- ಸಂಶೋಧನೆಗಳು ಸಿದ್ಧ ಮಾಡಿರುವ ಇನ್ನೊಂದು ಮಾಹಿತಿ ಇಡೀ ನ್ಯಾಯ ವ್ಯವಸ್ಥೆಯನ್ನೇ ಅಣಕ ಮಾಡುತ್ತದೆ. ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳು ಎಂದು ಪೊಲೀಸರ ಸುಪರ್ದಿಯಲ್ಲಿರುವ ಅಥವಾ ಸುಧಾರಣಾ ಗೃಹಗಳಲ್ಲಿರುವ ಅಥವಾ ನ್ಯಾಯಾಂಗ ಬಂಧನದಲ್ಲಿರುವ ಮಕ್ಕಳಲ್ಲಿ ಸುಮಾರು 80ರಿಂದ 85 ಪ್ರತಿಶತ ಮಕ್ಕಳು ನಿಜವಾಗಿಯೂ ಪೋಷಣೆ ಮತ್ತು ರಕ್ಷಣೆಯನ್ನು ಪಡೆಯಬೇಕಾದವರು.
- ಈಗಲೂ ಸಹ ಜಗತ್ತಿನಾದ್ಯಂತ 33 ದೇಶಗಳಲ್ಲಿ ತಪ್ಪು ಮಾಡಿದ ಮಕ್ಕಳಿಗೆ ನ್ಯಾಯಾಲಯವು ದೈಹಿಕ ಶಿಕ್ಷೆಯನ್ನು ನೀಡಲು ಸಮ್ಮತಿಸುತ್ತದೆ.
- ಹದಿನೈದು ವರ್ಷದೊಳಗಿನ ಮಕ್ಕಳು ಮಾಡಿರಬಹುದಾದ ಅಪರಾಧ (!)ಗಳಿಗೆ ಮರಣದಂಡನೆಯ ಶಿಕ್ಷೆ ನೀಡಲು ಆರು ದೇಶಗಳಲ್ಲಿ ಸಮ್ಮತಿಯಿದೆ.
- ಬಂಧೀಖಾನೆಗಳಿಗೆ ವಿಚಾರಣಾಧೀನರಾಗಿ ಹೋಗುವ ಮಕ್ಕಳಿಂದ ಕಟ್ಟಡ ನಿರ್ಮಾಣ, ಶೌಚಾಲಯಗಳ ಶುದ್ಧಿಯೇ ಮೊದಲಾದ ಕೆಲಸಗಳನ್ನು ಮಾಡಿಸುತ್ತಾರೆ ಎಂಬ ದೂರು ಇದೆ.

ಬಂಧೀಖಾನೆಯ ನಿವಾಸಿ, 'ಖೈದಿ' ಎಂಬ ಪದದ ಹಿಂದೆಯೇ ಮನಸ್ಸಿನಲ್ಲಿ ಮೂಡುವುದು ಸಮಾಜ ವಿರೋಧೀ ಕೃತ್ಯಗಳಲ್ಲಿ ತೊಡಗಿರುವ ಅಪರಾಧಿಗಳು– ಕಳ್ಳರು, ಕೊಲೆಗಾರರು, ಅತ್ಯಾಚಾರಿಗಳು, ಕಳ್ಳಸಾಗಣೆಗಾರರು, ಇತ್ಯಾದಿ. (ರಾಜಕೀಯ ಖೈದಿಗಳು ಅಥವಾ ಆಂದೋಲನ, ಹೋರಾಟಗಳಲ್ಲಿ ತೊಡಗಿದ್ದವರನ್ನೂ ಬಂಧಿಸಿ ಕಾರಾಗೃಹಗಳಲ್ಲಿಡುವ ವಾಡಿಕೆ ಇದೆ). ನಮ್ಮ ಬಂದೀಖಾನೆಗಳಲ್ಲಿ ಇಂತಹ ಅಪರಾಧಿಗಳು ಹಾಗೂ ಇಂತಹ ಅಪರಾಧಗಳನ್ನು ಮಾಡಿರಬಹುದು ಎನ್ನುವ ಶಂಕೆಯ ಮೇಲೆ ಬಂಧಿತರಾದವರ ನಡುವೆ ಮಕ್ಕಳೂ ಇದ್ದಾರೆ. ಈ ಕುರಿತು 2005ರಲ್ಲಿ 'ಬಂದೀಖಾನೆಗಳಲ್ಲಿ ಮಕ್ಕಳು' ಎಂಬ ವಿಚಾರವನ್ನು ಕುರಿತು ಅಂತಾರಾಷ್ಟ್ರೀಯ ಮಟ್ಟದ ವರದಿ ತಯಾರು ಮಾಡಿದ್ದ ಯುನೈಟೆಡ್ ಕಿಂಗ್‌ಡಂನ ಜೂಬಿಲಿ ಆಂದೋಲನ, ಭಾರತದ ಬಂಧೀಖಾನೆಗಳಲ್ಲೂ ಮಕ್ಕಳು ಇದ್ದಾರೆ ಎಂದು ವಿಶ್ವಸಂಸ್ಥೆಗೆ ದೂರು ನೀಡಿದೆ. ಈ ವರದಿಯಂತೆ ಎಷ್ಟೋ ಬಾರಿ ಮಕ್ಕಳನ್ನು ಅವರು ಮಾಡಿಲ್ಲದ ಅಥವಾ ಅವರು ಮಾಡಿರಬಹುದೆಂಬ ಶಂಕೆಯಿಂದ ಬಂಧಿಸಿ ಯಾವುದೇ ವಿಚಾರಣೆ ಮಾಡದೆ ದೀರ್ಘ ಕಾಲದವರೆಗೆ ಇಡಲಾಗಿದೆ. ಅವರ ಮೇಲೆ ಹೊರಿಸಲಾಗಿರುವ ಆಪಾದನೆಗಳು ಬಹುತೇಕ ತೀರಾ ನಿಕೃಷ್ಟವಾದುದು[1]. (ನಿರ್ದಿಷ್ಟ ಕಾರಣಗಳಿಂದ ಕಾರಾಗೃಹದಲ್ಲಿ ವಾಸಿಗಳಾಗಿರುವ ತಾಯಂದಿರೊಡನೆ ಇರಬಹುದಾದ ಮಕ್ಕಳನ್ನು ಇಲ್ಲಿ ಗಣನೆಗೆ ತೆಗೆದುಕೊಂಡಿಲ್ಲ).

ಅಪರಾಧ ಶಾಸ್ತ್ರದ ಅಧ್ಯಯನ ಮುಂದುವರಿದಂತೆ, ತಪ್ಪು ಮತ್ತು ಅಪರಾಧಗಳ ನಿಷ್ಕರ್ಷೆ, ನ್ಯಾಯ, ಶಿಕ್ಷೆ, ಸುಧಾರಣೆ ಎಂಬೆಲ್ಲ ಸಂಗತಿಗಳು ಅನಾವರಣಗೊಳ್ಳುತ್ತಾ ಹೋಗುತ್ತದೆ. ಅಪರಾಧ ಶಾಸ್ತ್ರವೂ ಸಹ ಬಲವಾಗಿ ನಂಬುವುದು, ಇಂದಿನ ದಿನಗಳಲ್ಲಿ ಹೆಚ್ಚಿನ ಮಟ್ಟಿಗೆ ಚಲಾವಣೆಯಲ್ಲಿರುವ ಮಕ್ಕಳ ಹಕ್ಕುಗಳು ಮತ್ತು ಮಾನವ ಹಕ್ಕುಗಳ ಹಿನ್ನೆಲೆಯಲ್ಲಿ ಅತ್ಯಂತ ಹೆಚ್ಚು ಮನ್ನಣೆ ಪಡೆದಿರುವ 'ಸುಧಾರಣಾ ಕ್ರಮಗಳಲ್ಲಿ'. ಇಲ್ಲಿ ಶಿಕ್ಷೆಯಿಲ್ಲ, ಪ್ರಾಯಶಃ ಮಾಹಿತಿ, ವಿಚಾರಗಳೊಡನೆ ಶಿಕ್ಷಣ ಮತ್ತು ಮುಂದಿನ ಜೀವನವನ್ನು ಅರ್ಥಬದ್ಧವಾಗಿ ಮಾಡಿಕೊಳ್ಳಲು ಅಪರಾಧ ಮಾಡಿರಬಹುದಾದ ವ್ಯಕ್ತಿಗೆ ನೀಡುವ ಅವಕಾಶ.

ಬಂಧೀಖಾನೆಗಳೆಂದರೆ ಹಿಂದಿನ ದಿನಗಳಲ್ಲಿ ಇದ್ದ ಅರ್ಥ, ಸಮಾಜದ ಸದಸ್ಯರಿಗೆ ಮೋಸ, ಕಿರುಕುಳ,

---

[1] http://www.jubileeaction.co.uk/campaigns/kbb/jcusa051102.html

ಹಿಂಸೆ ನೀಡುವ ವ್ಯಕ್ತಿಗಳನ್ನು ಸಮಾಜದಿಂದ ದೂರವಿಟ್ಟು ಸಮಾಜಕ್ಕೆ ರಕ್ಷಣೆ ನೀಡುವುದು ಮತ್ತು ಅಂತಹ ಸಮಾಜ ವಿದ್ರೋಹ ಮಾಡುವವರ ವಿರುದ್ಧ ಸೇಡು ತೀರಿಸಿಕೊಳ್ಳುವುದು. ಆದರೆ ಕಾಲ ಬದಲಾದಂತೆ ಅದು ಸಮಾಜಕ್ಕೆ ರಕ್ಷಣೆ ನೀಡುವುದರ ಜೊತೆಗೆ ಶಿಕ್ಷೆ ನೀಡುವುದೂ ಎಂದೂ, ಆ ಮೂಲಕ ಅಪರಾಧ ಮಾಡಿದ ವ್ಯಕ್ತಿಗೆ ತಪ್ಪಿನ ಅರಿವಾಗುವಂತೆ ಮಾಡುವುದು ಎಂದಾಯಿತು. ನವ ಸಮಾಜದ ಮುಂದಿನ ದಿನಗಳಲ್ಲಿ ಬಂಧೀಖಾನೆಗಳಲ್ಲಿ ಅಪರಾಧ ಮಾಡಿದವರನ್ನು ಇಡುವಾಗ ಅವರ ನಡವಳಿಕೆಗಳು, ರೀತಿನೀತಿಗಳಲ್ಲಿ ಪರಿವರ್ತನೆಯಾಗಿ ಆತ/ಆಕೆ ಸುಧಾರಣೆ ಹೊಂದಲಿ ಎಂಬುದಾಗಿ ಬದಲಾಗಿದೆ.

ಪ್ರತಿಯೊಂದು ವ್ಯಕ್ತಿಯೂ ಸಹ ಮಾನವ ಸಂಪನ್ಮೂಲವಾಗಿರುವುದರಿಂದ, ಈ ಸಂಪನ್ಮೂಲ ಸೋರಿಹೋಗದಂತೆ, ಮುರುಟಿ ಹೋಗದಂತೆ ರಕ್ಷಿಸುವುದು ಹಾಗೂ ಮುಂದೆ ಸಮಾಜದಲ್ಲಿ ಕಾನೂನು ಪಾಲಿಸುವ ವ್ಯಕ್ತಿಗಳಾಗುವಂತೆ ತನ್ನಲ್ಲಿಗೆ ಅಪರಾಧಿಗಳೆಂದು ನ್ಯಾಯಾಲಯದಿಂದ ನಿರ್ಧರಿತವಾಗಿ ಬರುವ ನಿವಾಸಿಗಳನ್ನು ಪರಿವರ್ತಿಸುವುದು ಈಗ ಬಂಧೀಖಾನೆಗಳ ಧ್ಯೇಯವಾಗಿದೆ.

ಅಪರಾಧ ಶಾಸ್ತ್ರ ಮತ್ತು ಅಪರಾಧಿಗಳ ಸುಧಾರಣಾ ಶಾಸ್ತ್ರ ಬಲ್ಲವರು ಕಲಿಯುವ ಒಂದು ಮೂಲ ವಿಚಾರವನ್ನು ನಾನಿಲ್ಲಿ ಮತ್ತೆ ನೆನಪಿಸಲು ಬಯಸುತ್ತೇನೆ. 'ಅಪರಾಧ' ಅಥವಾ ಇಂಗ್ಲಿಷ್ ಭಾಷೆಯ **CRIME, Criminal** ಎಂಬ ಶಬ್ದಗಳ ವಿಶ್ಲೇಷಣೆ ಮಾಡಿದಾಗ ದೊರೆಯುವ ಅರ್ಥ ಹೀಗಿರುತ್ತದೆ.

'ಒಬ್ಬ ವ್ಯಕ್ತಿ ಆಯಾ ಪ್ರದೇಶ ಮತ್ತು ಕಾಲಘಟ್ಟದಲ್ಲಿ ಮಾಡಿರಬಹುದಾದ ಕೃತ್ಯ ಸಮಾಜ ವಿದ್ರೋಹಿ ಎಂದೂ ಅಂತಹ ಕೃತ್ಯ ಕಾನೂನಿಗನುಗುಣವಾಗಿ ಉಲ್ಲಂಘನೆಯಾಗಿದ್ದು, ಹಾಗೆ ಅಂತಹ ಕೃತ್ಯ ಮಾಡಿದವರಿಗೆ ಶಿಕ್ಷೆ ವಿಧಿಸಬಹುದು ಎಂದು ನ್ಯಾಯಾಲಯ ನಿಶ್ಚಯಿಸಿದಲ್ಲಿ ಮಾತ್ರ ಅಂತಹ ವ್ಯಕ್ತಿಯನ್ನು ಅಪರಾಧಿಯೆಂದೂ, ಅವರ ಕೃತ್ಯವನ್ನು ಅಪರಾಧವೆಂದೂ ತಿಳಿಯಲಾಗುತ್ತದೆ'. ಹೀಗಾಗಿ ಅಂತಹ ವ್ಯಕ್ತಿಗೆ ಶಿಕ್ಷೆ ವಿಧಿಸುವುದು, ಕಾರಾಗೃಹಗಳಲ್ಲಿ ಅಂತಹ ವ್ಯಕ್ತಿಗಳನ್ನು ನ್ಯಾಯಾಲಯದ ನಿರ್ದೇಶನದ ಮೇರೆಗೆ ನಿರ್ದಿಷ್ಟ ಉದ್ದೇಶಕ್ಕೆ ಹಾಗೂ ನಿರ್ದಿಷ್ಟ ಅವಧಿಗೆ ಇರಿಸಲಾಗುತ್ತದೆ.

ಒಟ್ಟಿನಲ್ಲಿ ಮೊದಲನೆಯದಾಗಿ, ಒಂದು ಕೃತ್ಯ ಮತ್ತು ಅದಕ್ಕೆ ಶಿಕ್ಷೆ ಇದ್ದು, ಪ್ರಕರಣವನ್ನು ಕುರಿತು ವಿಚಾರ ಮಾಡಿದ ನ್ಯಾಯಾಲಯ ಸಂಬಂಧಿಸಿದ ವ್ಯಕ್ತಿಗೆ ಶಿಕ್ಷೆ ನೀಡಿ ಎಂದು ನಿರ್ದೇಶಿಸಿದಾಗ ಅಂತಹ ವ್ಯಕ್ತಿಯನ್ನು ಅಪರಾಧಿ ಎಂದು ಗುರುತಿಸಲಾಗುತ್ತದೆ.

ಎರಡನೆಯದಾಗಿ, ಯಾವುದೇ ಕೃತ್ಯವನ್ನು ಅಪರಾಧ ಎನ್ನಬೇಕಾದಲ್ಲಿ ಅದನ್ನು ಕುರಿತು ದೇಶ ಕಾಲಗಳಲ್ಲಿ ವ್ಯಾಖ್ಯಾನ ಬದಲಾಗುತ್ತಾ ಹೋಗುತ್ತಿದೆ ಎಂಬುದು.

ಮೂರನೆಯದಾಗಿ, ಯಾವ ವ್ಯಕ್ತಿಗೆ ತಾನು ಮಾಡಿರುವ ಕೃತ್ಯದ ಕಾರಕ ಕಾರಣಗಳ ಬಗ್ಗೆ ಸ್ಪಷ್ಟ ಅರಿವು ಇರುತ್ತದೋ ಅಂತಹವರು ಮಾಡಿದ ಅಪರಾಧಿಕ ಕೃತ್ಯಕ್ಕೆ ಖಂಡಿತಾ ಶಿಕ್ಷೆ ಎನ್ನುವ ಸಾಮಾನ್ಯ ಜ್ಞಾನವನ್ನು ನಾವು ಮರೆಯಬಾರದು.

ಈ ಹಿನ್ನೆಲೆಯಲ್ಲಿ ಭಾರತ ದೇಶದ ಮಕ್ಕಳು, 1989ರ ನಂತರದ ದಿನಗಳಲ್ಲಿ ಜಾಗತಿಕವಾಗಿ ಮಕ್ಕಳನ್ನು ಕುರಿತು ನಿಲುವುಗಳಲ್ಲಿ ಆಗಿರುವ ಬದಲಾವಣೆಗಳು, ಭಾರತದ ಕೆಲವು ಪ್ರಮುಖ ಕಾನೂನುಗಳಲ್ಲಿ 2000ದಲ್ಲಿ ಆಗಿರುವ ಬದಲಾವಣೆಗಳು ಮತ್ತು ಯಾವುದೇ ಕೃತ್ಯ ಮಾಡುವ ಸಂದರ್ಭದಲ್ಲಿ ಕಾರಕ ಕಾರಣಗಳ ಅರಿವು ಇರುವ ಇಲ್ಲದಿರುವ ಮಕ್ಕಳ ಸ್ಥಿತಿಯನ್ನು ಗಮನಿಸಿ ಮಕ್ಕಳೇಕೆ ಕಾರಾಗೃಹಗಳಲ್ಲಿ ಇರಬಾರದು ಎಂಬ ಬಗ್ಗೆ ಸ್ಪಷ್ಟ ನಿಲುವು ತೆಗೆದುಕೊಳ್ಳುವ ದಿಶೆಯಲ್ಲಿ ಚಿಂತಿಸೋಣ.

**ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳು**

ಮಕ್ಕಳ ನ್ಯಾಯ (ಮಕ್ಕಳ ಪೋಷಣೆ  ಮತ್ತು ರಕ್ಷಣೆ) ಕಾಯಿದೆಯ ವಿವರಣೆಯಂತೆ ಸಮಾಜದ ನೀತಿ ನಿಯಮ, ಕಾನೂನು ಕಾಯಿದೆಗಳ ವಿರುದ್ಧದ ಕೃತ್ಯಗಳಲ್ಲಿ ತೊಡಗುವ ಮಕ್ಕಳನ್ನು ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳೆಂದೇ (ಸೆಕ್ಷನ್ 2 –ಐ) ಗುರುತಿಸಲಾಗಿದೆ. ಮಕ್ಕಳು ಎಂದರೆ 18 ವರ್ಷದೊಳಗಿನವರು ಎಂದು ಸೆಕ್ಷನ್ 2 (ಕೆ) ವಿವರಿಸುತ್ತದೆ. ಇಂತಹ ಮಕ್ಕಳಿಗೆ ಶಿಕ್ಷೆಯ ಬದಲು ಮಕ್ಕಳ ಹಕ್ಕುಗಳನ್ನು ಮಾನ್ಯ ಮಾಡುವ ಹಿನ್ನೆಲೆಯಲ್ಲಿ ಮತ್ತೆ ತಮ್ಮ ಪರಿಸ್ಥಿತಿಗಳನ್ನು ಉತ್ತಮಪಡಿಸಕೊಳ್ಳಲು ಅವಕಾಶ ನೀಡುವುದಾಗಿದೆ. ಸೆಕ್ಷನ್ 2(ಎಲ್) ಕಾನೂನಿನೊಡನೆ ಸಂಘರ್ಷದಲ್ಲಿರುವ ಮಗು ಎಂದರೆ, ಕಾನೂನನ್ನು ಉಲ್ಲಂಘಿಸಿದ ದಿನದಂದು 18 ವರ್ಷ ಪೂರೈಸದ ವ್ಯಕ್ತಿ ಎಂದು ಸ್ಪಷ್ಟ ಪಡಿಸಿದೆ. ಈ ಕಾಯಿದೆ ಜಾರಿಗೆ ಬಂದ ಸಮಯದಲ್ಲಿ (2000) 18 ವರ್ಷದೊಳಗಿನವರು ಯಾರಾದರೂ ದೇಶದ ಯಾವುದೇ ಬಂಧೀಖಾನೆಯಲ್ಲಿ ಯಾವುದೇ ಕಾರಣಕ್ಕೇ ಇರಲಿ ಅಂತಹ ಮಕ್ಕಳನ್ನು ಬಿಡಿಸಿ, ಅವರು ತಮ್ಮ

ಉಳಿದ ಸಮಯವನ್ನು ವಿಶೇಷ ಗೃಹದಲ್ಲಿ ಕಳೆಯಬೇಕು ಎಂದು ಸೆಕ್ಷನ್ 64 ಸ್ಪಷ್ಟ ಪಡಿಸಿದೆ.

ಮಕ್ಕಳ ನ್ಯಾಯ ಕಾಯಿದೆಯ ಸೆಕ್ಷನ್ 17ರಂತೆ ಮಕ್ಕಳನ್ನು ಯವುದೇ ನ್ಯಾಯಾಲಯದೆದುರು ಯಾವುದೇ ಆಪಾದನೆ ಹೊರೆಸಿ ತಂದರೂ ಅವರ ಮೇಲೆ ಭಾರತ ದಂಡ ಸಂಹಿತೆಯಲ್ಲಿರುವಂತೆ ಯಾವುದೇ ಕ್ರಮವನ್ನು ಕೈಗೊಳ್ಳಬಾರದು ಮತ್ತು ಯಾವುದೇ ಶಿಕ್ಷೆಯ ಆದೇಶ ಹೊರಡಿಸಬಾರದು. ಪ್ರಾಯಶಃ ಇಲ್ಲಿ ಇಂತಹ ಪ್ರಕರಣಗಳಲ್ಲಿ ಮಕ್ಕಳನ್ನು ನ್ಯಾಯಾಂಗ ಬಂಧನದಲ್ಲೂ ಇರಿಸಬಾರದು ಎಂದು ಸ್ಪಷ್ಟ ಪಡಿಸಬೇಕಿತ್ತೇನೋ?

ಸೆಕ್ಷನ್ 19ರಲ್ಲಿರುವ ವಿವರಣೆ ಇನ್ನೂ ವಿಶೇಷವಾದದ್ದಾಗಿದೆ. 18 ವರ್ಷದೊಳಗಿನ ಮಕ್ಕಳನ್ನು ಯಾವುದಾದರೂ ಆಪಾದನೆಯ ಮೇಲೆ ಕಾನೂನು ಪಾಲಕರು ತಮ್ಮ ವಶಕ್ಕೆ  ತೆಗೆದುಕೊಂಡದ್ದೇ ಆದಲ್ಲಿ, ಅವರ ಮೇಲೆ ಯಾವುದೇ ರೀತಿಯ ಕಾನೂನಿನ ಕ್ರಮ ಕೈಗೊಂಡದ್ದೇ ಆದಲ್ಲಿ, ನಿರ್ದಿಷ್ಟ ಅವಧಿ ಮುಗಿದ ಮೇಲೆ ಅಂತಹ ಮಕ್ಕಳಿಗೆ ಸಂಬಂಧಿಸಿದ ವಿವರಗಳು, ದಾಖಲೆ, ಕಡತಗಳನ್ನು ತೆಗೆಸಬೇಕು/ನಾಶ ಮಾಡಬೇಕು. ಪ್ರಾಯಶಃ ಬಂಧೀಖಾನೆಗೆ ಯಾವುದೇ ಕಾರಣಕ್ಕಾಗಲಿ ಒಬ್ಬ ವ್ಯಕ್ತಿ ಪ್ರವೇಶಿಸಿದರೆ ಅವರನ್ನು ಕುರಿತು ಇರುವ ಕಡತಗಳನ್ನು ಶಾಶ್ವತವಾಗಿ ಮುಚ್ಚುವುದಿಲ್ಲವೇನೋ? ಇಂತಹ ಸ್ಥಿತಿಗೆ ಮಕ್ಕಳು ಗುರಿಯಾದಲ್ಲಿ ಅದು ಭವಿಷ್ಯದಲ್ಲಿ ಅವರ ಮೇಲೆ ಬೀರುವ ಪರಿಣಾಮದ ಬಗ್ಗೆ ಚಿಂತಿಸಬೇಕಿದೆ.

## ಮಕ್ಕಳ ಹಕ್ಕುಗಳು

ವಿಶ್ವ ಸಂಸ್ಥೆಯು 1989ರಲ್ಲಿ ಮಕ್ಕಳ ಹಕ್ಕುಗಳ ಒಡಂಬಡಿಕೆಯನ್ನು ಮುಂದಿಟ್ಟಿತು. ಈ ಒಡಂಬಡಿಕೆಯ ಮೊದಲ ಅಂಶವೇ ಮಕ್ಕಳೆಂದರೆ 18 ವರ್ಷದೊಳಗಿನ ಜೀವಿಗಳು ಎಂಬುದು. ಬದುಕಲು, ರಕ್ಷಣೆ ಹೊಂದಲು ಮತ್ತು ವಿಕಾಸ ಹೊಂದಲು ವಯಸ್ಕರ, ಸಮಾಜದ ನೆರವು ಮತ್ತು ಆಶ್ರಯ ಯಾರಿಗೆ ಸಿಗಬೇಕೋ ಅವರು ಮಕ್ಕಳು ಅಥವಾ ಮಕ್ಕಳ ಸ್ಥಿತಿಗತಿಯಲ್ಲಿರುವವರು ಎಂಬುದಾಗಿದೆ. ಇಂತಹ ಮಕ್ಕಳಿಗೆ ಬಹುತೇಕ ತಮ್ಮ ಕೃತ್ಯಗಳ ಪರಿಣಾಮ (Consequences) ಏನೆಂಬುದು ತಿಳಿದಿರುವುದಿಲ್ಲ. ಅನೇಕ ಬಾರಿ ಮಕ್ಕಳು ಮಾಡಿರಬಹುದಾದ ತಪ್ಪುಗಳು, ಅಪರಾಧದಂತೆ ಕಂಡರೂ ಸಹ ಅವರಿಗೆ ಶಿಕ್ಷೆಯನ್ನು ನೀಡುವುದರಿಂದ ಕಾರಕ ಕಾರಣಗಳ ಅರಿವಿಲ್ಲದ ಅವರ ಬಾಲ್ಯವನ್ನು ಅವರಿಂದ ಕಿತ್ತುಕೊಂಡಂತಾಗುತ್ತದೆ.

ಯಾವುದೇ ಕಾರಣಕ್ಕೆ ಮಕ್ಕಳನ್ನು ಬಂಧೀಖಾನೆಗಳಲ್ಲಿ ಇಟ್ಟಲ್ಲಿ ಅವರ ಮೇಲೆ ಪ್ರಭಾವ ಬೀರುವ ಅಂಶಗಳು:

1. ಶಿಕ್ಷಣದ ಅವಕಾಶಗಳಿಂದ ವಂಚನೆ.
2. ದೈಹಿಕ ಶೋಷಣೆ
3. ಲೈಂಗಿಕ ಶೋಷಣೆ
4. ಸಂಬಂಧಿಗಳೊಡನೆ ಸಂಪರ್ಕ ಕಡಿತ
5. ಮಾಹಿತಿ ಸೌಲಭ್ಯದ ಕೊರತೆ
6. ಕಾನೂನು ಸೇವೆ ಪಡೆಯಲು ಅಡ್ಡಿ
7. ಅಸಮರ್ಪಕ ಆರೋಗ್ಯ ಸೌಲಭ್ಯಗಳು
8. ಕೀಳರಿಮೆಯಿಂದ ಮಾನಸಿಕ ಹಿಂಸೆ
9. ವಯಸ್ಕ ಅಪರಾಧಿಗಳ ಪ್ರಭಾವ ಮಕ್ಕಳ ಮೇಲೆ ಆಗುವುದು
10. ಅವಕಾಶಗಳಿಂದ ವಂಚಿತರಾಗುವುದು

ಮಕ್ಕಳ ಹಕ್ಕುಗಳ ಒಡಂಬಡಿಕೆಯಲ್ಲಿನ ಈ ಮುಂದಿನ ಕೆಲವು ಪ್ರಮುಖ ಅಂಶಗಳನ್ನು ಗಮನಕ್ಕೆ ತೆಗೆದುಕೊಳ್ಳೋಣ.

**ಪರಿಚ್ಛೇದ 6 :** ಎಲ್ಲ ಮಕ್ಕಳು ಆರೋಗ್ಯಕರವಾದ ಜೀವನವನ್ನು ನಡೆಸಿ ಅಭಿವೃದ್ಧಿಯಾಗುವುದನ್ನು ಸರ್ಕಾರವು ಖಾತರಿಗೊಳಿಸಬೇಕು.

ಆದರೆ, ಬಂಧೀಖಾನೆಗಳಲ್ಲಿ ಹುಟ್ಟಿದ ಮಕ್ಕಳು ಅಥವಾ ಬಂಧೀಖಾನೆಗಳಲ್ಲಿ ಮಕ್ಕಳು ಇರುವಂತಾದರೆ ಅವರಿಗೆ ಆರೋಗ್ಯಕರವಾದ ಬೆಳವಣಿಗೆಯನ್ನು ಖಾತರಿಗೊಳಿಸಲು ಸಾಧ್ಯವಾಗುವುದಿಲ್ಲ.

**ಪರಿಚ್ಛೇದ 7 :** ಪ್ರತಿಯೊಂದು ಮಗುವಿಗೂ ಒಂದು ಹೆಸರು, ರಾಷ್ಟ್ರೀಯತೆ ಹಾಗೂ ಪೋಷಕರೊಂದಿಗಿರುವ ಹಕ್ಕು ಇದೆ.

ಪೊಲೀಸ್ ಠಾಣೆಯ ಸೆಲ್‌ನಲ್ಲಿ ಮಕ್ಕಳನ್ನಿಟ್ಟರೆ ಅಥವಾ ಕಾರಾಗೃಹಗಳಲ್ಲಿ ಮಕ್ಕಳಿದ್ದಲ್ಲಿ ಅವರ ಈ ಹಕ್ಕುಗಳ ಉಲ್ಲಂಘನೆ ಆಗುತ್ತದೆ.

**ಪರಿಚ್ಛೇದ 16 :** ಮಕ್ಕಳಿಗೆ ತಮ್ಮ ಖಾಸಗೀತನವನ್ನು ಕಾಪಾಡಿಕೊಳ್ಳುವ ಹಕ್ಕಿದೆ.

ಕಾರಾಗೃಹದಲ್ಲಿರುವ ಮಕ್ಕಳಿಗೆ ಅವರ ಖಾಸಾಗಿತನದ ಉಲ್ಲಂಘನೆ ಆಗುತ್ತಲೇ ಇರುತ್ತದೆ. ಅವರ ಧಾರ್ಮಿಕ ಹಕ್ಕುಗಳಾಗಲೀ, ಸಾಂಸ್ಕೃತಿಕ ಮತ್ತು ಸಾಮಾಜಿಕ ಹಕ್ಕುಗಳನ್ನು ಪಾಲಿಸಲು ಮಕ್ಕಳಿಗೆ ಸಾಧ್ಯವಾಗುವುದೇ ಇಲ್ಲ.

**ಪರಿಚ್ಛೇದ 19 :** ಯಾವುದೇ ಮಗುವಿನ ಮೇಲೆ ಯಾರಿಂದಲೂ ಹಿಂಸೆ, ಶೋಷಣೆ ಮತ್ತು ನಿರ್ಲಕ್ಷ್ಯ ಉಂಟಾಗದಂತೆ ಸರ್ಕಾರಗಳು ರಕ್ಷಣೆ ನೀಡಬೇಕು.

ಕಾರಾಗೃಹಗಳಲ್ಲಿ ಮಕ್ಕಳಿದ್ದಲ್ಲಿ ಅವರ ಮೇಲೆ ಸತತವಾದ ಹಿಂಸೆ, ನಿರ್ಲಕ್ಷ್ಯ, ಶೋಷಣೆ ಆಗುವುದರಲ್ಲಿ ಯಾವುದೇ ಅನುಮಾನವಿಲ್ಲ. ಬೆಂಗಳೂರಿನ ಕಾರಾಗೃಹದಲ್ಲಿ ನಾನು ಭೇಟಿಯಾದ 18 ವರ್ಷದವರೆಂದು ಹೇಳಿಕೊಂಡ ಬಾಲಕರು ತಿಳಿಸಿದ ವಿಚಾರ ಖೇದ ಉಂಟು ಮಾಡುತ್ತದೆ. ಬಹುತೇಕ ಎಲ್ಲ ಮಕ್ಕಳನ್ನು ವಿವಿಧ ರೀತಿಯ ಕೆಲಸಗಳಿಗೆ ಅದರಲ್ಲೂ ಕಟ್ಟಡ ನಿರ್ಮಾಣಕ್ಕೆ ಬಳಸಿಕೊಳ್ಳಲಾಗುತ್ತಿದೆ. ಕಾನೂನಿನ ಪರಿಭಾಷೆಯಲ್ಲಿ ಇವರೆಲ್ಲರು ವಿಚಾರಣಾಧೀನರು. ಇವರಿಗೆ ಯಾವುದೇ ರೀತಿಯ ಮಜೂರಿ ಅಥವಾ ಕೂಲಿ ಕೊಡಲಾಗುತ್ತಿಲ್ಲ.

**ಪರಿಚ್ಛೇದ 39 :** ಯಾವುದೇ ಮಗು ನಿರ್ಲಕ್ಷ್ಯ, ಶೋಷಣೆ, ಕಿರುಕುಳ, ಕ್ರೌರ್ಯ, ಅಮಾನವೀಯ ಅಥವಾ ಅವಮಾನದ ವರ್ತನೆ, ದಂಡನೆ, ಆಘಾತಕ್ಕೆ ಗುರಿಯಾಗಬಾರದು ಹಾಗೂ ಅಕಸ್ಮಾತ್ ಇಂತಹ ಸ್ಥಿತಿಗೆ ಮಕ್ಕಳು ಬಿದ್ದದ್ದೇ ಆದಲ್ಲಿ ಅವರನ್ನು ಆದಷ್ಟೂ ಬೇಗನೆ ಸಮಾಜದ ಮುಖ್ಯ ವಾಹಿನಿಯೊಳಗೆ ಬೆರೆಯಲು ಅವಕಾಶ ಮಾಡಿಕೊಡಬೇಕು.

ಕಾರಾಗೃಹದಲ್ಲಿರುವ ಮಕ್ಕಳಿಗೆ ತಮ್ಮ ಕುಟುಂಬ ಅಥವಾ ಹತ್ತಿರದವರನ್ನು ಸಂಪರ್ಕಿಸುವ ವ್ಯವಸ್ಥೆಯನ್ನೂ ಮಾಡಿಕೊಡಲಾಗಿಲ್ಲ ಎಂದು ಆ ಬಾಲಕರು ತಿಳಿಸಿದ ವಿಚಾರದಿಂದ ಸ್ಪಷ್ಟವಾಗುತ್ತಿದೆ. ಇದೂ ಸಹ ಒಂದು ಪ್ರಮುಖ ಹಕ್ಕಿನ ಉಲ್ಲಂಘನೆ.

**ಪರಿಚ್ಛೇದ 40 :** ಕಾನೂನಿನೊಡನೆ ಸಂಘರ್ಷದಲ್ಲಿದ್ದ ಮಕ್ಕಳ ಕೃತ್ಯಗಳನ್ನು ಅಪರಾಧ ಎಂದಾಗಲೀ ಅಂತಹ ಮಕ್ಕಳನ್ನು ಅಪರಾಧಿಗಳೆಂದಾಗಲೀ ಗುರುತಿಸಬಾರದು. ಅಂತಹ ಮಕ್ಕಳನ್ನು ಆದಷ್ಟೂ ಬೇಗನೆ ಜಾಮೀನು ಅಥವಾ ಉಸ್ತುವಾರಿಯ ಮೇಲೆ ಬಿಡುಗಡೆ ಮಾಡಬೇಕು.

**ಗಮನಿಸಲೇಬೇಕಾದ ಅಂಶಗಳು**

- ಮಕ್ಕಳ ಹಕ್ಕುಗಳ ಒಡಂಬಡಿಕೆಗೆ ಒಪ್ಪಿ ಭಾರತ 1992ರಲ್ಲಿ ಸಹಿ ಹಾಕಿದೆ. ಅದರಂತೆ, ಯಾವುದೇ ಮಕ್ಕಳನ್ನು (18 ವರ್ಷದೊಳಗಿನವರನ್ನು) ಯಾವುದೇ ಕಾರಣಕ್ಕೂ ಬಂಧೀಖಾನೆಗಳಲ್ಲಿ ಇರಿಸುವಂತಿಲ್ಲ. ಹಾಗೆ ಇರಿಸಿದ್ದೇ ಆದಲ್ಲಿ ಅದನ್ನು ಅಂತಾರಾಷ್ಟ್ರೀಯ ಕಾನೂನುಗಳ ಉಲ್ಲಂಘನೆಯೆಂದೇ ಪರಿಗಣಿಸಲಾಗುತ್ತದೆ.
- ಪೊಲೀಸ್ ಠಾಣೆಗಳಲ್ಲಿ ಹಾಗೂ ಬಂಧೀಖಾನೆಗಳಲ್ಲಿ ಮಕ್ಕಳು ಇರುವ ವಾಸ್ತವವನ್ನು ನಾವು ಒಪ್ಪಿಕೊಳ್ಳಲೇಬೇಕು.
- ಸಾಮಾನ್ಯವಾಗಿ ಮಕ್ಕಳ ಮೇಲಿರುವ ಆಪಾದನೆಗಳು, ಕದ್ದ ಮಾಲನ್ನು ಇಟ್ಟುಕೊಂಡಿರುವುದು, ಇವರು ಅಪರಾಧ ಮಾಡಿರಬಹುದು ಎಂಬ ಶಂಕೆಯಿಂದ ಹಿಡಿದಿರುವುದು, ಕೆಲವು ಬಾರಿ ಮಕ್ಕಳು ಹೇಳಿರುವಂತೆ ಬೇರಾರೋ ಮಾಡಿರಬಹುದಾದ ಅಪರಾಧವನ್ನು ಮಕ್ಕಳ ಮೇಲೆ ಹೊರಿಸಿ, ಅವರು ಒಪ್ಪಿಕೊಳ್ಳುವಂತೆ ಒತ್ತಾಯಿಸಿರುವುದು, ಯಾವಾಗಲೋ ಒಮ್ಮೆ ತಪ್ಪು ಮಾಡಿರುವುದು ನಿಜವಾಗಿದ್ದರಿಂದ ಮತ್ತೆ  ಮತ್ತೆ ಪೊಲೀಸರು ಕರೆದೊಯ್ಯುವುದು, ಇತ್ಯಾದಿ.
- ಮಕ್ಕಳೂ ಸಹ ನೇರವಾಗಿ ಕಾನೂನು ವಿರೋಧೀ ಕೆಲಸಗಳಲ್ಲಿ ತೊಡಗಿರುವುದು ಮತ್ತು ಪೊಲೀಸರು ಅವರನ್ನು ತಮ್ಮ ವಶಕ್ಕೆ ತೆಗೆದುಕೊಂಡು ವಿಚಾರಣೆ ನಡೆಸಿ ಕ್ರಮ ಕೈಗೊಳ್ಳಲು ಮುಂದುವರೆದಿರಬಹುದು.
- ವಯಸ್ಕರು ನಡೆಸಿದ ಅಪರಾಧಗಳ ಜವಾಬ್ದಾರಿಯನ್ನು ಕೆಲವು ಬಾರಿ ಮಕ್ಕಳ ಮೇಲೆ ಹೇರುವ ಪ್ರವೃತ್ತಿಯನ್ನು ಆರಕ್ಷಕರು ಬಳಸುತ್ತಿರಬಹುದು.
- ವಯಸ್ಕರು ಅಪರಾಧ ಮಾಡುವಾಗ ಮಕ್ಕಳನ್ನೂ ಸೇರಿಸಿಕೊಂಡಿರುವ ಪ್ರಕರಣಗಳಲ್ಲಿ ಮಕ್ಕಳನ್ನೂ ಸಹ ಸೆರೆ ಹಿಡಿಯುವುದು ನಡೆದಿದೆ. ಕಾನೂನಿನಲ್ಲಿ ಅವಕಾಶಗಳಿಲ್ಲದಿದ್ದರೂ ವಯಸ್ಕರೊಡನೆಯೇ ಮಕ್ಕಳನ್ನೂ ಸಹ ಒಂದೇ ಪ್ರಕರಣದಲ್ಲಿ ಒಂದೇ ನ್ಯಾಯಾಧೀಶರೆದುರು ತರುವುದು ನಡೆದಿದೆ.
- ಮಕ್ಕಳು ಮನೆಯಿಂದ ಹೊರಗಿರುವುದು, ಮಾದಕ ವಸ್ತುಗಳನ್ನು ಸೇದುವುದು, ಸೇವಿಸುವುದು, ಶಿಕ್ಷಾರ್ಹವೂ ಗುರುತರವೂ ಆದ ಅಪರಾಧವಲ್ಲ. ಅಲ್ಲಿ ಬೇಕಿರುವುದು ಸುಧಾರಣೆ ಮತ್ತು ಆಪ್ತ ಸಮಾಲೋಚನೆ
- ಬಂದೀಖಾನೆಗಳಲ್ಲಿ ಮಕ್ಕಳನ್ನು ಇರಿಸಿದಾಗ ಅವರಿಂದ ವಯಸ್ಕರು ಮೈ ತಿಕ್ಕಿಸಿಕೊಳ್ಳುವುದು, ಸುತ್ತು ಕೆಲಸಗಳನ್ನು ಮಾಡಿಸಿಕೊಳ್ಳುವುದು, ಕೆಲವು ಬಾರಿ ಕಟ್ಟಡ ನಿರ್ಮಾಣ, ಶೌಚಾಲಯಗಳನ್ನು ಶುದ್ಧ ಮಾಡುವುದೇ ಇತ್ಯಾದಿ ಕೆಲಸಗಳಲ್ಲಿ ತೊಡಗಿಸುವುದು ಸಾಮಾನ್ಯ. (ಅಂತಹ

ಸಂದರ್ಭದಲ್ಲಿ ಮಕ್ಕಳಿಗೆ ಕೈಕಾಸಿನ ಖರ್ಚು ಕೊಟ್ಟಿರಲೂ ಬಹುದು!)

- ಪೊಲೀಸರು ಮಕ್ಕಳನ್ನು ಬಂಧಿಸಿದಾಗ, ಮಕ್ಕಳ ಜನ್ಮದಾಖಲೆ, ಶಾಲಾ ದಾಖಲೆ ಅಥವಾ ಇನ್ನಿತರ ಮಾಹಿತಿಗಳನ್ನು ಆದಷ್ಟೂ ಬೇಗನೆ ಪರಿಶೀಲಿಸುವುದಿಲ್ಲ
- ಇಂತಹ ದಾಖಲೆಗಳು ಲಭ್ಯವಿಲ್ಲದಿರುವುದರಿಂದ ನ್ಯಾಯಾಧೀಶರು ಸಹ ಸೂಕ್ತ ನಿರ್ಧಾರಗಳನ್ನು ಕೈಗೊಳ್ಳಲಾಗುವುದಿಲ್ಲ. ಎಷ್ಟೋ ಬಾರಿ ಮಕ್ಕಳನ್ನು ನ್ಯಾಯಾಲಯದಲ್ಲಿ ಹಾಜರು ಪಡಿಸದೆ, ಪ್ರಕರಣ ಇತ್ಯರ್ಥವಾಗದೆ ಮಕ್ಕಳು ದೀರ್ಘಕಾಲ ಬಂದೀಖಾನೆಗಳಲ್ಲಿ ವಿನಾಕಾರಣ ಇರಬೇಕಾಗುತ್ತದೆ.

## ಮಕ್ಕಳು ಮತ್ತು ನ್ಯಾಯ ವ್ಯವಸ್ಥೆಯನ್ನು ಕುರಿತು ಅಂತಾರಾಷ್ಟ್ರೀಯ ನಿಯಮಗಳು

- ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ 1989.
- ಮಕ್ಕಳ ನ್ಯಾಯ ಪಾಲನೆಗಾಗಿ ವಿಶ್ವ ಸಂಸ್ಥೆಯ ಕನಿಷ್ಠ ನಿಯಮಗಳು (ಬೀಜಿಂಗ್ ನಿಯಮಗಳು) 1985
- ಮಕ್ಕಳಿಂದ ತಪ್ಪುಗಳು ಸಂಭವಿಸದಂತೆ ತಡೆಗಟ್ಟಲು ವಿಶ್ವ ಸಂಸ್ಥೆಯ ಸಲಹೆಗಳು (ರಿಯಾದ್ ಸೂಚನೆಗಳು) 1990
- ಮಕ್ಕಳ ಸ್ವಾತಂತ್ರ್ಯ ಹರಣವಾಗದಂತೆ ರಕ್ಷಿಸಲು ವಿಶ್ವಸಂಸ್ಥೆಯ ನಿಯಮಗಳು 1990

## ಮಕ್ಕಳ ನ್ಯಾಯ ಕುರಿತು ಕೆಲವು ಮೂಲ ಅಂತಾರಾಷ್ಟ್ರೀಯ ಮಾಪಕಗಳು

- **ತಡೆ :** ಅಪಾಯಕಾರಿ ಸನ್ನಿವೇಶಗಳಲ್ಲಿ ಅಥವಾ ಅಪರಾಧಗಳು ಸಂಭವಿಸುತ್ತಿರುವ ಪರಿಸರದಲ್ಲಿ ಇರುವ ಮಕ್ಕಳಿಗೆ ರಕ್ಷಣೆ ಒದಗಿಸುವ ಮೂಲಕ ಹಾಗೂ ಅವರಿಗೆ ಸಾಮಾಜಿಕ ಸ್ವಾಸ್ಥ್ಯದ ಅರಿವು ಮೂಡಿಸುವ ಮೂಲಕ ಅವರು ಅಪರಾಧಿಕ ಜಗತ್ತಿಗೆ ಹೋಗದಂತೆ ತಡೆಯುವ ಕ್ರಮಗಳು
- **ಆದಷ್ಟೂ ಶೀಘ್ರವಾಗಿ ರಕ್ಷಣೆ ಒದಗಿಸುವುದು :** ಕಾನೂನಿನೊಡನೆ ಸಂಘರ್ಷಕ್ಕೆ ಬೀಳುವ ಮಕ್ಕಳಿಗೆ ಆದಷ್ಟೂ ಬೇಗನೆ ಸಮುದಾಯ ಆಧಾರಿತ ಸೇವೆ, ನಿರ್ದಿಷ್ಟವಾಗಿ ಯೋಜಿಸಿದ ಕಾರ್ಯಕ್ರಮಗಳು, ಅಸಾಂಸ್ಥೀಕರಣ, ವಿವಿಧ ಇಲಾಖೆಗಳು, ಸಂಸ್ಥೆಗಳ ಸಹಕಾರದೊಡನೆ ಸಹಕಾರ, ಸೌಕರ್ಯಗಳನ್ನು ಏರ್ಪಡಿಸುವುದು
- **ಅಪರಾಧದ ಹೊಣೆ ತಪ್ಪಿಸುವುದು :** 18 ವರ್ಷದೊಳಗಿನ ಮಕ್ಕಳಿಗೆ ಅಪರಾಧ ಮಾಡಿದ ಹೊಣೆಯನ್ನು ಹೊರಿಸುವುದಕ್ಕಿಂತಲೂ, ಮಾಡಿರುವ ತಪ್ಪಿನ ಅರಿವು ಉಂಟಾಗಿ, ಪರಿವರ್ತನೆಗೆ ಅವಕಾಶ ಮಾಡಿಕೊಡುವುದು.
- **ತನಿಖೆ ಮತ್ತು ವಿಚಾರಣೆ :** ಪೊಲೀಸರಾಗಲೀ, ನ್ಯಾಯಾಲಯವಾಗಲೀ ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳನ್ನು ಕುರಿತು ವಿಚಾರಣೆ, ತನಿಖೆ ಮಾಡುವಾಗ ಮಕ್ಕಳ ವಯಸ್ಸು ಹಾಗೂ ಮನಸ್ಸನ್ನು ಗಮನದಲ್ಲಿಟ್ಟುಕೊಂಡು ಮಕ್ಕಳಿಗೆ ಭವಿಷ್ಯದಲ್ಲಿ ತೊಂದರೆಯಾಗದಂತೆ ಕ್ರಮಗಳನ್ನು ಕೈಗೊಳ್ಳಬೇಕು.

**ಇತರ ವಿಚಾರಗಳು :**

- ಬಂಧೀಖಾನೆಯಲ್ಲಿ ತಳ್ಳುವುದರ ಬದಲು ಪರಿವರ್ತನೆ ಮತ್ತು ಪುನರ್ವಸತಿಗೆ ಗಮನ
- ಸಮಾಜದಿಂದ ದೂರವಿಡುವುದು ಅಥವಾ ಶಿಕ್ಷೆಯ ಬದಲು ಸಹಾಯ/ಸಲಹೆ/ಆಪ್ತ ಸಮಾಲೋಚನೆ
- ಮಗು ಮಾಡಿರಬಹುದಾದ ತಪ್ಪಿನ ತೀವ್ರತೆಯನ್ನು ಮಾತ್ರ ಗಮನದಲ್ಲಿ ಇಟ್ಟುಕೊಳ್ಳುವುದರ ಬದಲು ಮಗುವಿನ ಆವಶ್ಯಕತೆ, ಭವಿಷ್ಯದಲ್ಲಿ ವಿಕಾಸ ಹೊಂದಲು ಅವಕಾಶದತ್ತ ಗಮನಕೊಡಬೇಕು.
- ಎಷ್ಟು ಸಾಧ್ಯವೋ ಅಷ್ಟರ ಮಟ್ಟಿಗೆ ಮಗುವಿನ ವೈಯಕ್ತಿಕ ಸ್ವಾತಂತ್ರ್ಯಹರಣವಾಗದಂತೆ ಎಚ್ಚರಿಕೆ ವಹಿಸಬೇಕು.
- ಸಮಾಜದಿಂದ ಮಗುವನ್ನು ದೂರವಿಡಲೇಬೇಕು ಎಂಬುದು ಖಾತ್ರಿ ಆದಾಗ, ಅದನ್ನು ಲಭ್ಯವಿರುವ ಮಕ್ಕಳ ನಿಲಯಗಳ ಮೂಲಕ ಜಾರಿ ಮಾಡಬೇಕು.
- ಹಾಗೆ ಮಕ್ಕಳನ್ನು ಸಮಾಜದಿಂದ ದೂರವಿಡುವುದೇ ಆದಲ್ಲಿ, ಅವರನ್ನು ಮನುಷ್ಯರಂತೆ ಪರಿಗಣಿಸಿ, ಅವರ ಮೂಲಭೂತ ಹಕ್ಕುಗಳಿಗೆ ಮನ್ನಣೆ ನೀಡಿ, ವಿಚಾರಣೆ ಸಮಯದಲ್ಲಿ ಮತ್ತು ಆ ನಂತರ ವಯಸ್ಕ ಅಪರಾಧಿಗಳಿಂದ ದೂರವಿಟ್ಟು, ಮಕ್ಕಳಿಗೆ ಅವರ ಕುಟುಂಬದೊಡನೆ ಸಂಪರ್ಕವಿಟ್ಟುಕೊಳ್ಳಲು ಅವಕಾಶ ನೀಡಬೇಕು.
- ಮಕ್ಕಳಿಗೆ ದೈಹಿಕ ಹಿಂಸೆ ಮತ್ತು ಜೀವಾವಧಿ ಶಿಕ್ಷೆ ಹಾಗೂ ಮರಣ ದಂಡನೆಯನ್ನು ನೀಡಬಾರದು.
- ಮಕ್ಕಳನ್ನು ಸಾಂಸ್ಥಿಕ ರಕ್ಷಣೆಯಲ್ಲಿ ಇಡಲೇಬೇಕಾದಲ್ಲಿ, ಅಲ್ಲಿ ಅವರಿಗೆ ರಕ್ಷಣೆ, ಪೋಷಣೆ ಮತ್ತು ಆವಶ್ಯಕವಾದ ಮಾನಸಿಕ, ಆರೋಗ್ಯ ಚಿಕಿತ್ಸೆ, ಶಿಕ್ಷಣ, ವೃತ್ತಿ ತರಬೇತಿ ಹಾಗೂ ಸಾಮಾಜಿಕ ಬೆಂಬಲವನ್ನು ನೀಡಬೇಕು.
- ಮಕ್ಕಳ ಗೌರವಕ್ಕೆ ಎಂದಿಗೂ ಕುಂದು ಬಾರದಂತೆ ಸಂಸ್ಥೆಗಳಲ್ಲಿ ಎಚ್ಚರಿಕೆ ವಹಿಸಿ, ಅಂತಹ

ನಿಲಯಗಳಿಗೆ ನಿರ್ದಿಷ್ಟ ವ್ಯಕ್ತಿಗಳ ಸಮಿತಿಗಳು ಕಾಲಕಾಲಕ್ಕೆ ಭೇಟಿ ನೀಡಲು ಅವಕಾಶವಿರಬೇಕು.

– ಸಂಸ್ಥೆಗಳಲ್ಲಿ ಇರಿಸಿದ ಮಕ್ಕಳಿಗೆ ಮತ್ತೆ ಸಮುದಾಯದೊಡನೆ ಸೇರಲು ಎಲ್ಲ ತರಹದ ವ್ಯವಸ್ಥೆ ಮತ್ತು ಬೆಂಬಲಗಳನ್ನು ನೀಡಬೇಕು.

## ಇಂದಿನ ದಿನಗಳಲ್ಲಿ ಈ ಅಂತಾರಾಷ್ಟ್ರೀಯ ಮಾಪಕಗಳು ಏಕೆ ಬಹಳ ಮುಖ್ಯವಾಗಿದೆ?

- ಜಗತ್ತಿನಾದ್ಯಂತ ಹದಿವಯಸ್ಸಿನವರು ಅಪರಾಧೀ ಕೃತ್ಯಗಳಲ್ಲಿ ಪಾಲ್ಗೊಳ್ಳುವುದು ಹಾಗೂ ಪೊಲೀಸರು ಅಂತಹ ಮಕ್ಕಳನ್ನು ಪತ್ತೆ ಹಚ್ಚಿ ತಮ್ಮ ವಶಕ್ಕೆ ತೆಗೆದುಕೊಳ್ಳುವುದು ನಡೆದಿದೆ.
- ಇತ್ತೀಚಿನ ದಿನಗಳಲ್ಲಿ ಹದಿ ವಯಸ್ಸಿನವರು ಹೆಚ್ಚು ಹೆಚ್ಚು ಕ್ರೌರ್ಯ, ಹಿಂಸೆ ಹಾಗೂ ಹೀನಾಯವಾದ ಕೃತ್ಯಗಳಲ್ಲಿ ತೊಡಗುತ್ತಿರುವುದು ವರದಿಯಾಗುತ್ತಿದೆ.
- ಕೆಲವು ದೇಶಗಳಲ್ಲಿ ಈಗಲೂ ಸಹ ಮಕ್ಕಳಿಗೆ ಹಾಗು ಹದಿ ವಯಸ್ಸಿನವರಿಗೆ ತೀವ್ರವಾದ ಶಿಕ್ಷೆಗಳನ್ನು ನೀಡುತ್ತಿರುವ ಅಥವಾ ವಿಚಾರಣಾ ಸಮಯದಲ್ಲಿ ಮಕ್ಕಳನ್ನು ಬಂಧಿಸಿಡುವ ಪ್ರಕರಣಗಳು ಮೇಲಿಂದ ಮೇಲೆ ವರದಿಯಾಗುತ್ತಿದೆ ಹಾಗೂ ಈ ಕುರಿತು ಸಾಕ್ಷಿಗಳು ದೊರೆತಿವೆ.
- ಮುಂದುವರೆಯುತ್ತಿರುವ ದೇಶಗಳಷ್ಟೇ ಅಲ್ಲದೆ ಮುಂದುವರಿದ ದೇಶಗಳಲ್ಲೂ ಸಹ ಬಂಧೀಖಾನೆಗಳಲ್ಲಿ ಮಕ್ಕಳನ್ನು ಇಟ್ಟಿರುವ ಬಗ್ಗೆ ಪುರಾವೆಗಳು ಲಭಿಸಿವೆ.
- ಬಂಧೀಖಾನೆಗಳಲ್ಲಿ ಮಕ್ಕಳನ್ನು ಇಟ್ಟ ಸಮಯದಲ್ಲಿ ಅವರ ಮೇಲೆ ದೈಹಿಕ, ಲೈಂಗಿಕ ಶೋಷಣೆಗಳಾಗಿರುವ ಬಗ್ಗೆ ಪುರಾವೆಗಳು ಇವೆ.

## ಮಕ್ಕಳನ್ನು ಕಾರಾಗೃಹಗಳಲ್ಲಿ ಇರಿಸಬಾರದೆಂಬ ನ್ಯಾಯಾಲಯದ ತೀರ್ಪು (DFIÄ 1988 SG 414)

ಸಂಜಯ್ ಸೂರಿ ಮತ್ತು ದೆಹಲಿ ಆಡಳಿತ ನಡುವೆ ನಡೆದ ಪ್ರಕರಣವನ್ನು 1988ರಲ್ಲಿ ನ್ಯಾಯಾಲಯವು ಇತ್ಯರ್ಥಗೊಳಿಸುವಾಗ ಈ ಮುಂದಿನಂತೆ ತೀರ್ಪು ನೀಡಿದೆ. (ಸಾರ ಸಂಗ್ರಹ) ಯಾವುದೇ ವ್ಯಕ್ತಿಯನ್ನು ಯಾವುದೇ ಕಾರಣಕ್ಕೆ ಕಾರಾಗೃಹದಲ್ಲಿ ಇರಿಸುವ ನಿರ್ದೇಶನ ನೀಡುವ ಅಧಿಕಾರ ಇರುವ ಯಾವುದೇ ಹಂತದ ನ್ಯಾಯಾಧೀಶರು ಬಂಧೀಖಾನೆಗೆ ಕಳುಹಿಸಬೇಕಾದ ವ್ಯಕ್ತಿಯ ವಯಸ್ಸನ್ನು ಸ್ಪಷ್ಟವಾಗಿ ನಮೂದಿಸಬೇಕು. ತಮ್ಮೆದುರು ಬರುವ ವ್ಯಕ್ತಿಯ ವಯಸ್ಸನ್ನು ಕುರಿತು ಅನುಮಾನ ಬಂದಾಗ ನ್ಯಾಯೋಚಿತವಾಗಿ ವರ್ತಿಸಿ, ವಾರೆಂಟ್ ನೀಡುವಾಗ ಅದರಲ್ಲಿ ವ್ಯಕ್ತಿಯ ವಯಸ್ಸನ್ನು ಕಡ್ಡಾಯವಾಗಿ ನೀಡಲೇಬೇಕು. ದೇಶದಾದ್ಯಂತ ಇರುವ ಎಲ್ಲ ಕಾರಾಗೃಹಗಳಿಗೆ ಸರ್ವೋಚ್ಚ ನ್ಯಾಯಾಲಯವು ನಿರ್ದೇಶನವನ್ನು ನೀಡಿ, ನ್ಯಾಯಾಲಯಗಳು ನಿರ್ದೇಶನವಿತ್ತಿದ್ದರೂ ಸಹ ತಮಗೆ ನ್ಯಾಯಾಲಯವು ಕಳುಹಿಸುವ ವಾರೆಂಟಿನಲ್ಲಿ ವಯಸ್ಸನ್ನು ಗುರುತಿಸಿಲ್ಲದಿದ್ದಲ್ಲಿ ಅದನ್ನು ಒಪ್ಪಬಾರದೆಂದು ನಿರ್ದೇಶಿಸಿದೆ. ಹಾಗೇನಾದರೂ ವಯಸ್ಸನ್ನು ನಮೂದಿಸದೆ ವಾರೆಂಟನ್ನು ಕಳುಹಿಸಿದ್ದೇ ಆದಲ್ಲಿ, ಅದರಲ್ಲಿರುವ ತಪ್ಪನ್ನು ತಿದ್ದಬೇಕೆಂದು ಕೋರಿಕೆಯನ್ನು ಸಲ್ಲಿಸಬಹುದು.

## ಈಗ ತುರ್ತಾಗಿ ಆಗಬೇಕಿರುವುದು :

– ರಾಜ್ಯ ಹಾಗೂ ರಾಷ್ಟ್ರದ ವಿವಿಧ ಬಂಧೀಖಾನೆಗಳಲ್ಲಿ ಮಕ್ಕಳೆಂದು ಶಂಕಿಸಲಾಗುವ ಎಲ್ಲರ ವಿವರಗಳನ್ನು ತೆಗೆದುಕೊಂಡು ಅವರ ವಯಸ್ಸನ್ನು ಖಾತರಿ ಪಡಿಸುವ ದಾಖಲೆಗಳನ್ನು ಪರಿಶೀಲಿಸಿ, ಅಂತಹವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕು ಅಥವಾ ಸುಧಾರಣಾ ಗೃಹಗಳಿಗೆ ವರ್ಗಾಯಿಸಬೇಕು ಅಥವಾ ಬಿಡುಗಡೆಯನ್ನೇ ಮಾಡಬೇಕು

– ಕಾನೂನು ಉಲ್ಲಂಘನೆ ಮಾಡಿರುವ ಮಕ್ಕಳನ್ನು ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳು ಎಂದು ಗುರುತಿಸಬೇಕು.

– ಬಾಲಾಪರಾಧಿಗಳು ಎನ್ನುವ ಸಂಬೋಧನೆಯನ್ನು ಈಗಿಂದೀಗಲೇ ಎಲ್ಲರೂ (ಅಧಿಕಾರಿಗಳು, ಮಾಧ್ಯಮ ಪ್ರತಿನಿಧಿಗಳು, ಸಂಶೋಧಕರು, ಶಿಕ್ಷಕರು) ನಿಲ್ಲಿಸಲೇಬೇಕು.

– ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳಿಗೆ ಯಾವುದೇ ರೀತಿಯ ತಡ ಮಾಡದೆ ರಕ್ಷಣೆ, ನ್ಯಾಯ ಸಿಗುವುದೆಂಬ ಭರವಸೆ ನೀಡಿ ತಿರಸ್ಕಾರ ಮತ್ತು ಭಯ, ಭ್ರಮನಿರಸನದ ಸ್ಥಿತಿಯಿಂದ ಹೊರ ತರಲು ಆಪ್ತಸಲಹೆ ವ್ಯವಸ್ಥೆ ಆಗಬೇಕು.

– ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳನ್ನು ಪೊಲೀಸರು ವಶಕ್ಕೆ ತೆಗೆದುಕೊಂಡಲ್ಲಿ ಅವರನ್ನು ಮಕ್ಕಳ ನ್ಯಾಯ ಮಂಡಳಿಯೆದುರು ಹಾಜರು ಪಡಿಸಬೇಕು.

– ಅಕಸ್ಮಾತ್ ಪೊಲೀಸರ ತಪ್ಪಿನಿಂದಾಗಿ, ಮಕ್ಕಳನ್ನು ನ್ಯಾಯಾಲಯದೆದುರು ತಂದಲ್ಲಿ, ನ್ಯಾಯಾಧೀಶರು ಪ್ರಕರಣವನ್ನು ಗಮನಕ್ಕೆ ತೆಗೆದುಕೊಂಡು ಮಗುವನ್ನು ಮಕ್ಕಳ ನ್ಯಾಯ ಮಂಡಳಿಗೆ ವರ್ಗಾಯಿಸಬೇಕು.

- ಮಕ್ಕಳ ಮೇಲಿರುವ ಆರೋಪ ಅಷ್ಟೊಂದು ಗುರುತರವಾಗಿಲ್ಲದಿದ್ದಲ್ಲಿ, ಮಕ್ಕಳ ನ್ಯಾಯ ಕಾಯಿದೆಯಲ್ಲಿನ ಅವಕಾಶಗಳನ್ನು ಬಳಸಿಕೊಂಡು ಮಕ್ಕಳನ್ನು ಜಾಮೀನಿನ ಮೇಲೆ ಅಥವಾ ಉಸ್ತುವಾರಿಯಲ್ಲಿ ಬಿಡುಗಡೆ ಮಾಡಬೇಕು. (ಅಪರಾಧ ದಂಡ ಸಂಹಿತೆಯ ಸೆಕ್ಷನ್ 360ರ ಬಳಕೆಯ ಸಾಧ್ಯತೆ).
- ರಾಜ್ಯದ ಎಲ್ಲ ಕಡೆ ಇರುವ ತಾಲೂಕು ಮತ್ತು ಜಿಲ್ಲಾ ಮಟ್ಟದಲ್ಲಿನ ಹಾಗೂ ರಾಜ್ಯದ ಮುಖ್ಯ ಕಾರಾಗೃಹಕ್ಕೆ ಸ್ವತಂತ್ರವಾದ ಮಾನವ ಹಕ್ಕುಗಳು ಹಾಗೂ ಮಕ್ಕಳ ಹಕ್ಕುಗಳ ಪ್ರತಿಪಾದಕ ಸಂಘಟನೆಗಳು ಕಾಲಕಾಲಕ್ಕೆ ಭೇಟಿ ನೀಡಲು ಅಧಿಕೃತವಾಗಿ ಅವಕಾಶ ಮಾಡಿಕೊಡಬೇಕು.
- ಮಕ್ಕಳ ಪ್ರಕರಣಗಳನ್ನು ಸೂಕ್ತವಾಗಿ ನಡೆಸಲು ರಾಜ್ಯದ ಎಲ್ಲ ಪೊಲೀಸರಿಗೆ ತರಬೇತಿ ಹಾಗೂ ಉನ್ನತ ಮಟ್ಟದ ಅಧಿಕಾರಿಗಳಿಂದ ನಿರ್ದೇಶನಗಳನ್ನು ನೀಡಬೇಕು.
- ಕಾರಾಗೃಹಗಳ ಅಧಿಕಾರಿಗಳಿಗೆ ಮಕ್ಕಳ ಹಕ್ಕುಗಳು ಹಾಗೂ ಮಾನವ ಹಕ್ಕುಗಳು ಮತ್ತು ಮಕ್ಕಳ ನ್ಯಾಯ ಕಾಯಿದೆ ಕುರಿತು ತರಬೇತಿಗಳು ಹಾಗೂ ಸೂಕ್ತ ನಿರ್ದೇಶನಗಳನ್ನು ನೀಡಬೇಕು.
- ಎಲ್ಲ ಹಂತಗಳಲ್ಲೂ ನ್ಯಾಯಾಧೀಶರುಗಳಿಗೆ ಮಕ್ಕಳ ನ್ಯಾಯ ಕಾಯಿದೆಯ ಮೂಲ ಅಂಶಗಳ ಮಾಹಿತಿ ಹಾಗೂ ತರಬೇತಿ ನೀಡಲೇಬೇಕು.
- ಬಂಧೀಖಾನೆಗಳಲ್ಲಿ 'ಲೋಕಾಯುಕ್ತರು' (ammbudsperson) ಇದ್ದು ಯಾವುದೇ ಮಗುವನ್ನು ತಪ್ಪಾಗಿ ಅಥವಾ ಉದ್ದೇಶಪೂರ್ವಕವಾಗಿ ಕಾರಾಗೃಹಕ್ಕೆ ತಂದದ್ದೇ ಆದಲ್ಲಿ, ತಕ್ಷಣ ಕ್ರಮ ಕೈಗೊಳ್ಳುವಂತಾಗಬೇಕು.

**ಕರ್ನಾಟಕ ಕಾರಾಗೃಹಗಳ ಕೈಪಿಡಿ, ಕರ್ನಾಟಕ ಕಾರಾಗೃಹಗಳ ಕಾಯಿದೆ ಹಾಗೂ ಕರ್ನಾಟಕ ಕಾರಾಗೃಹ ವಾಸಿಗಳ ಕಾಯಿದೆಯಲ್ಲಿ ಬರಬೇಕಿರುವ ಬದಲಾವಣೆಗಳು ಮತ್ತು ತಿದ್ದುಪಡಿಗಳು**

ಕರ್ನಾಟಕ ಬಂಧೀಖಾನೆಗಳ ಕಾಯಿದೆ 1963 (THE KARNATAKA PRISONS ACT, 1963) ಮತ್ತು ಕರ್ನಾಟಕ ಬಂಧೀಖಾನೆಗಳ ನಿವಾಸಿಗಳ ಕಾಯಿದೆ 1963 (THE KARNATAKA PRISONERS ACT, 1963) ರಲ್ಲಿ ಎಲ್ಲಿಯೂ ಬಂಧೀಖಾನೆಗಳ ನಿವಾಸಿಯಾಗುವವರು ಅಥವಾ ಕಾರಾಗೃಹಕ್ಕೆ ಎಷ್ಟು ವಯಸ್ಸು ದಾಟಿದವರನ್ನು ಕಳುಹಿಸಬೇಕು ಎಂಬ ಉಲ್ಲೇಖವಿಲ್ಲ.

ಆದರೆ, ಬಂದೀಖಾನೆಗಳ ಕಾಯಿದೆ 1963ರ ವಿಭಾಗ 5ರ ಸೆಕ್ಷನ್ 26ರಲ್ಲಿ ಉಲ್ಲೇಖಿಸಿರುವಂತೆ, ಮಹಿಳೆಯರು ಮತ್ತು ಪುರುಷರನ್ನು ಪ್ರತ್ಯೇಕವಾಗಿರಿಸಬೇಕು, 21ವರ್ಷದೊಳಗಿನ ಪುರುಷರನ್ನು ಬಂಧೀಖಾನೆಯಲ್ಲಿ ಇರಿಸಿದ್ದೇ ಆದಲ್ಲಿ ಅವರನ್ನು ಇತರ ನಿವಾಸಿಗಳಿಂದ ಪ್ರತ್ಯೇಕಿಸಬೇಕು, ಮೈನೆರೆದ/ದೊಡ್ಡವರಾದ who have arrived at the age of puberty) ನಿವಾಸಿಗಳನ್ನಂತೂ ಕಡ್ಡಾಯವಾಗಿ ಇತರರಿಂದ ಪ್ರತ್ಯೇಕಿಸಲೇಬೇಕು, ಕೇವಲ ದೋಷಾರೋಪಣೆ ಹೊತ್ತು ಕಾರಾಗೃಹಕ್ಕೆ ಬಂದಿರುವ ನಿವಾಸಿಗಳನ್ನು ಅಪರಾಧವು ಸಾಬೀತಾಗಿ ಕಾರಾಗೃಹ ವಾಸದ ಶಿಕ್ಷೆ ಅನುಭವಿಸುತ್ತಿರುವವರಿಂದ ಕಡ್ಡಾಯವಾಗಿ ಪ್ರತ್ಯೇಕಿಸಲೇಬೇಕು. ಹಾಗೆಯೇ ಸಿವಿಲ್ (ನಾಗರೀಕ) ಪ್ರಕರಣಗಳು ಹಾಗೂ ಅರಾಧೀ ಪ್ರಕರಣಗಳ ಆರೋಪ ಹೊತ್ತವರು ಹಾಗೂ ಶಿಕ್ಷೆ ಅನುಭವಿಸುತ್ತಿರುವವರನ್ನು ಪ್ರತ್ಯೇಕಿಸಲೇಬೇಕು.

ಕಾರಾಗೃಹಗಳ ನಿರ್ವಹಣೆಗೆಂದೇ ರೂಪಿತವಾಗಿರುವ ಕರ್ನಾಟಕ ಕಾರಾಗೃಹ ಕೈಪಿಡಿ 1978ನ್ನು ಇತ್ತೀಚಿನ ಬೆಳವಣಿಗೆಗಳ ಹಿನ್ನೆಲೆಯಲ್ಲಿ ತಿದ್ದುಪಡಿ ಮಾಡಲೇಬೇಕಿದೆ. ಹೀಗೆ ತಿದ್ದುಪಡಿ ಮಾಡುವಾಗ ಇತ್ತೀಚಿನ ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ, ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣನೆ)ಕಾಯಿದೆಯ ಮೊದಲಾದವುಗಳನ್ನು ಗಣನೆಗೆ ತೆಗೆದುಕೊಳ್ಳಲೇಬೇಕು.

ಕೈಪಿಡಿಯ ಹಲವಾರು ಭಾಗಗಳಲ್ಲಿ ಉಲ್ಲೇಖವಾಗಿರುವ ವಿವಿಧ ರೀತಿಯ ಬಂಧೀಖಾನೆಗಳನ್ನು ಹೆಸರಿಸುವಾಗ ಮಕ್ಕಳ ಕಾರಾಗೃಹ (Juvenile Jails) ಎಂಬುದು ಮೇಲಿಂದ ಮೇಲೆ ಕಂಡು ಬರುತ್ತದೆ. ಇದನ್ನು ಸಂಪೂರ್ಣವಾಗಿ ಕೈಬಿಡಬೇಕು. ವಿಭಾಗ 1 ಮತ್ತು ಸೆಕ್ಷನ್ 6 (4)ರಲ್ಲಿರುವ ಹೇಳಿಕೆ, 'ಯಾರಾದರೂ ಮಕ್ಕಳನ್ನು ಅಪರಾಧಿಯೆಂದು ಪರಿಗಣಿಗಣಿಸಿ, ನ್ಯಾಯಾಲಯವು ಅಂತಹವರನ್ನು 3 ತಿಂಗಳಿಗೂ ಹೆಚ್ಚು ಕಾಲದ ಕಾರಾಗೃಹಕ್ಕೆ ಕಳುಹಿಸಲ್ಪಟ್ಟ ಅಂತಹವರನ್ನು ಧಾರವಾಡದ, ಜುವೆನೈಲ್ ಜೈಲ್‌ಗೆ ಕಳುಹಿಸಬೇಕು'. ಈ ಇಡೀ ಪಂಕ್ತಿಯನ್ನು ತೆಗೆದುಬಿಡಬೇಕು.

ವಿಭಾಗ 6ರಲ್ಲಿ ವೈದ್ಯಾಧಿಕಾರಿಗಳ ಕರ್ತವ್ಯಗಳ ಬಗ್ಗೆ ವಿವರಿಸಲಾಗಿದೆ. ಇವರು ಪರೀಕ್ಷೆಗಳನ್ನು ನಡೆಸುವಾಗ ಯಾರಾದರೂ 18 ವರ್ಷದೊಳಗಿನವರು ಎಂಬ ಅನುಮಾನ ಬಂದಲ್ಲಿ ಸಂಬಂಧ ಪಟ್ಟವರಿಗೆ ವರದಿ ಮಾಡಬೇಕೆಂದೂ ಸೇರಿಸಬೇಕು.

ವಿಭಾಗ 10ರಲ್ಲಿ ಕೆಲವು ಪದಗಳನ್ನು ವ್ಯಾಖ್ಯಾನಿಸಲಾಗಿದೆ. (ಸೆಕ್ಷನ್ 174) ಅದರಲ್ಲಿ ಪ್ರಮುಖವಾಗಿ ಗಮನಿಸಬೇಕಾಗಿರುವುದು ಈ ಮುಂದಿನವು

ಮಗು : 16 ವರ್ಷದೊಳಗಿನವರು.

ಯುವಕರು : ಅಪರಾಧ ಮಾಡಿರುವರೆಂದು ಶಂಕಿಸಲಾದ ಮಕ್ಕಳು

ಹದಿವಯಸ್ಸಿನ ಅಪರಾಧಿಗಳು : 16 ವರ್ಷದಿಂದ 23 ವರ್ಷದೊಳಗಿನವರು.

ಈ ಎಲ್ಲ ಪದಪುಂಜಗಳು ಹಾಗೂ ಅವುಗಳ ವ್ಯಾಖ್ಯಾನಗಳನ್ನು ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯಿದೆ 2000/ತಿದ್ದುಪಡಿ 2006 ಅನ್ವಯ ಬದಲಾಯಿಸಿ 18 ವರ್ಷದೊಳಗಿನವರು ಮಕ್ಕಳೆಂದೂ 18 ವರ್ಷ ದಾಟಿದವರಿಗೆ ಕಾಯಿದೆ ನೀಡುವ ಹೊಸ ಪದದ ಅರ್ಥವನ್ನೂ ನೀಡಬೇಕು.

**ಉಪಸಂಹಾರ**

ಮಕ್ಕಳು ಕಾರಾಗೃಹಗಳಲ್ಲಿರಲು ಹಲವಾರು ಕಾರಣಗಳಿರಬಹುದು. ಮಕ್ಕಳು ಕಾರಾಗೃಹದಲ್ಲಿಯೇ ಹುಟ್ಟಿರಬಹುದು ಅಥವ ಬೇರಾವುದೋ ಕಾರಣದಿಂದ ಕಾರಾಗೃಹಕ್ಕೆ ಬಂದವರಾಗಿರಬಹುದು. ಅಂತಹ ಸಂದರ್ಭಗಳಲ್ಲಿ ಮಕ್ಕಳ ಎಲ್ಲ ಹಕ್ಕುಗಳ ಉಲ್ಲಂಘನೆಯಾಗುತ್ತದೆ.

'ಮಕ್ಕಳನ್ನು ಯಾವುದೇ ಉದ್ದೇಶಕ್ಕೆ ಬಂಧೀಖಾನೆಯಲ್ಲಿ ಇಟ್ಟದ್ದೇ ಆದಲ್ಲಿ, ಅವರು ಮುಂದೆ ಒಬ್ಬ ಜವಾಬ್ದಾರಿಯುತ ಮತ್ತು ಸಮಾಜಕ್ಕೆ ನೆರವಾಗಬಲ್ಲ ವಯಸ್ಕರಾಗುವ ಸಾಧ್ಯತೆಗಳು ಕಡಿಮೆ. ಬದಲಾಗಿ, ಮತ್ತೊಂದು ಸಮಾಜ ವಿದ್ರೋಹಿ ಕೃತ್ಯವನ್ನು ಮಾಡಿ ಮತ್ತೆ ಬಂಧೀಖಾನೆಗೆ ಬರುವ ಸಾಧ್ಯತೆಯೇ ಹೆಚ್ಚು. ಮಕ್ಕಳನ್ನು ಬಂಧೀಖಾನೆಗೆ ಹಾಕುವುದು ತಕ್ಷಣಕ್ಕೆ ಪರಿಹಾರವೆನಿಸಿದರೂ ಅದರಿಂದ ದೊಡ್ಡ ಹಾನಿಯನ್ನೇ ಮುಂದೆ ನಾವೆಲ್ಲರೂ ಎದುರಿಸಬೇಕಾಗುತ್ತದೆ'.

ಈ ಎಲ್ಲದರ ಹಿನ್ನೆಲೆಯಲ್ಲಿ ತಕ್ಷಣಕ್ಕೆ ಆಗಬೇಕಿರುವುದು, ಕೇವಲ ಕಾರಾಗೃಹಗಳ ಅಧಿಕಾರಿಗಳಿಗೆ ತಿಳಿವಳಿಕೆ ನೀಡುವುದಕ್ಕಿಂತಲೂ, ಪೊಲೀಸರಿಗೆ ಹಾಗೂ ನ್ಯಾಯಾಲಯಗಳ ಅಧಿಕಾರಿಗಳಿಗೆ ಸೂಕ್ತವಾದ ಮಾಹಿತಿ ನೀಡುವುದು. ಅಪರಾಧದ ಆಪಾದನೆಯ ಮೇಲೆ ಮಕ್ಕಳನ್ನು ಪೊಲೀಸರು ಹಿಡಿದಿದ್ದೇ ಆದಲ್ಲಿ (ಸೆಕ್ಷನ್ 10) ಅವರನ್ನು ತಕ್ಷಣವೇ ಮಕ್ಕಳ ವಿಶೇಷ ಪೊಲೀಸ್ ಘಟಕದೆದುರು (ಸೆಕ್ಷನ್ 63) ತಂದು ಮಕ್ಕಳ ನ್ಯಾಯ ಕಾಯಿದೆಯ ಅವಕಾಶಗಳಂತೆ ಜಾಮೀನಿನ ಮೇಲೆ ಬಿಡುಗಡೆ ಮಾಡಲು (ಸೆಕ್ಷನ್ 12) ನ್ಯಾಯಾಧೀಶರು, ಮಕ್ಕಳ ವಿಶೇಷ ಪೊಲೀಸ್ ಘಟಕದವರು ಪ್ರಾಮುಖ್ಯತೆ ನೀಡಬೇಕು.

ಬಹಳ ಮುಖ್ಯವಾಗಿ ಆಗಬೇಕಿರುವುದು, ಸಾರ್ವಜನಿಕರಿಗೆ ಈ ವಿಚಾರಗಳ ಬಗ್ಗೆ ಅರಿವು ಮೂಡಿಸುವುದು. ಯಾರಾದರೂ ತಮ್ಮ ಮಕ್ಕಳು ಅಥವಾ ತಮಗೆ ತಿಳಿದ ಯಾವುದೇ ಮಗು (18 ವರ್ಷದೊಳಗಿನವರು) ಯಾವುದೇ ಕಾರಣಕ್ಕೂ ಪೊಲೀಸರ ವಶದಲ್ಲಿದ್ದಾರೆ ಅಥವಾ ನ್ಯಾಯಾಂಗ ಕಸ್ಟಡಿಯಲ್ಲಿದ್ದಾರೆ ಎಂದು ತಿಳಿದಲ್ಲಿ, ಧೈರ್ಯ ಗುಂದಬಾರದು. ಮಗುವಿನ ವಯಸ್ಸನ್ನು ದೃಢಪಡಿಸುವ ಯಾವುದಾದರೂ ಅಧಿಕೃತ ದಾಖಲೆಯನ್ನು ತೆಗೆದುಕೊಂಡು ಸಂಬಂಧಿತ ನ್ಯಾಯಾಲಯದಲ್ಲಿ ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯಿದೆಯ ಸೂಕ್ತ ಸೆಕ್ಷನ್ನುಗಳನ್ನು ಉಲ್ಲೇಖಿಸಿ ಮನವಿ ಸಲ್ಲಿಸಬೇಕು. ವಕೀಲರುಗಳಿಗೆ ಈ ಬಗ್ಗೆ ತಿಳಿದಿದ್ದಲ್ಲಿ ಒಳ್ಳೆಯದು, ತಿಳಿಯದೇ ಇದ್ದಲ್ಲಿ, ರಾಜ್ಯದ ಕಾನೂನು ಸೇವಾ ಪ್ರಾಧಿಕಾರವನ್ನು ಸಂಪರ್ಕಿಸಿ ಸಹಾಯ ಪಡೆಯಬಹುದು.

ಬಂಧೀಖಾನೆಗಳ ಅಧಿಕಾರಿಗಳೂ ಸಹ ತಮ್ಮ ಅಧಿಕೃತ ಕೈಪಿಡಿಯ ವಿಭಾಗ 37ರಲ್ಲಿರುವ ನಿರ್ದೇಶನಗಳನ್ನು ಹಾಗೂ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನಗಳನ್ನು ಬಳಸಿಕೊಳ್ಳಬೇಕು. ನ್ಯಾಯಾಲಯದ ವಾರೆಂಟ್‌ನೊಂದಿಗೆ ಕಳುಹಿಸಲ್ಪಟ್ಟ ಯಾವುದೇ ವ್ಯಕ್ತಿ 18 ವರ್ಷದೊಳಗಿನವರು ಎಂಬ ಅನುಮಾನ ಬಂದಲ್ಲಿ, ತಕ್ಷಣವೇ ನಿರ್ದಿಷ್ಟ ವಿಧಾನದ ಮೂಲಕ ಸಂಬಂಧಿಸಿದ ನ್ಯಾಯಾಲಯಕ್ಕೆ ಹಾಗೂ ಮಕ್ಕಳ ನ್ಯಾಯ ಮಂಡಳಿಗೆ ಮಾಹಿತಿ ಕಳುಹಿಸಬೇಕು ಮತ್ತು ಮಕ್ಕಳನ್ನು ಮಕ್ಕಳ ಪರಿವೀಕ್ಷಣಾಲಯಕ್ಕೆ ರವಾನಿಸಬೇಕು.

ಬಂಧೀಖಾನೆಗಳ ನಿವಾಸಿಗಳಿಗೆ ಮಾಹಿತಿ ನೀಡಲು ಹಲವಾರು ವಿಧಾನಗಳನ್ನು ಬಳಸಲಾಗುತ್ತದೆ. ಧ್ವನಿವರ್ಧಕದ ಮೂಲಕ ಮಾಹಿತಿ ಹೇಳುವುದು ಹಾಗೂ ಅಲ್ಲಲ್ಲಿ ಸೂಚನೆಗಳನ್ನು ಅಂಟಿಸುವುದು. ಯಾರಾದರೂ 18 ವರ್ಷದೊಳಗಿನವರು ಅಕಸ್ಮಾತ್ ಬಂಧೀಖಾನೆಗೆ ಬಂದದ್ದೇ ಆದಲ್ಲಿ ಅವರು ತಕ್ಷಣ ಸಂಬಂಧಿಸಿದ ಅಧಿಕಾರಿಗಳನ್ನು ಸಂಪರ್ಕಿಸಬೇಕು ಎಂದು ಧ್ವನಿವರ್ಧಕದ ಮೂಲಕ ಹಾಗೂ

ನೋಟೀಸುಗಳನ್ನು ಅಲ್ಲಲ್ಲಿ ಅಂಟಿಸುವ ಮೂಲಕ ನೀಡಲೇಬೇಕು.

ಇದಕ್ಕೆಲ್ಲಾ ಮಿಗಿಲಾಗಿ, ಪೋಷಕರು ತಮ್ಮ ಮಕ್ಕಳು ಯಾವುದೇ ರೀತಿಯ ಕಾನೂನು ಉಲ್ಲಂಘನೆ, ಅಪರಾಧೀ ಕೃತ್ಯಗಳಲ್ಲಿ ಭಾಗಿಯಾಗದಂತೆ ಎಚ್ಚರಿಕೆ ವಹಿಸಬೇಕು. ಯುವಜನರೂ ಸಹ ಶಿಕ್ಷಣ, ಒಳ್ಳೆಯ ಹವ್ಯಾಸ ಹಾಗೂ ಒಳ್ಳೆಯ ಸಂಗದಲ್ಲಿ ಇದ್ದು ಸಮಾಜ ಮುಖಿಗಳಾಗಬೇಕು.


- **ವಾಸುದೇವ ಶರ್ಮಾ,**
  ನಿರ್ದೇಶಕರು,
  ಮಕ್ಕಳ ಹಕ್ಕುಗಳ ಟ್ರಸ್ಟ್,
  4606, 6ನೇ ಮಹಡಿ, ಹೈ ಪಾಯಿಂಟ್ 4,
  ಅರಮನೆ ರಸ್ತೆ, ಬೆಂಗಳೂರು, 560 001

ದೂ. 080 41138285 ಮೊ. 9448472513


**<u>ಮಕ್ಕಳ ಮೇಲೆ ದೌರ್ಜನ್ಯ, ಹಿಂಸೆ ಆಗುತ್ತಿದ್ದರೆ ತಡ ಮಾಡಬೇಡಿ ದೂರು ನೀಡಿ. ಮಕ್ಕಳ ರಕ್ಷಣೆಗೆ ಮುಂದಾಗಿ.</u>**




